**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ಸಿ4(2)ಪ್ರೌಶಾಶಿ.ಜೇ.11/2014/15 ದಿನಾಂಕ.20-08-2015

**ಅಧಿಸೂಚನೆ**

**ವಿಷಯ:** 01/01/2015ರಲ್ಲಿದ್ದಂತೆ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ರವರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:-** 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿ.ಪಿ.ಎ.ಆರ್.59 ಎಸ್.ಆರ್.ಇ.2002 ದಿನಾಂಕ:24-06-2003.

2. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು:1957 ನಿಯಮ-10ರಂತೆ
3. **ಈ ಕಛೇರಿ ಸುತ್ತೋಲೆ ದಿನಾಂಕ:18.06.2015 ಮತ್ತು 25.06.2015.**

********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪ್ರೌಢಶಾಲಾ ಸಹ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ಉಲ್ಲೇಖಿತ 1 ರ ಸರ್ಕಾರದ ಅಧಿಸೂಚನೆಯನ್ವಯ ಈಗಾಗಲೇ 31.12.2010 ರವರೆಗೆ ಪ್ರೌಢಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಅಂತಿಮಗೂಳಿಸಿ ಪ್ರಕಟಿಸಲಾಗಿದೆ. ಪ್ರಸ್ತುತ ದಿನಾಂಕ:01/01/2011 ರಿಂದ ದಿನಾಂಕ:01/01/2015 ರವರೆಗೆ ನೇಮಕಾತಿ/ನೇರನೇಮಕಾತಿ/ಬಡ್ತಿ/ವರ್ಗಾವಣೆ ಪಡೆದು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್-2 ಶಿಕ್ಷಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957 ರ ನಿಯಮ-10 ರಂತೆ ಸಿದ್ಧಪಡಿಸಿ, ಆಯಾ ಜಿಲ್ಲೆಗಳಲ್ಲಿನ ಉಪನಿರ್ದೇಶಕರು ಈ ಕಛೇರಿಗೆ ಸಲ್ಲಿಸಿರುವುದನ್ನು ಪರಿಶೀಲಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಈ ಸಂಬಂಧ ಶಿಕ್ಷಕರುಗಳು ದಿನಾಂಕ:20/09/2015ರವರೆಗೆ ಆಕ್ಷೇಪಣೆ ಸಲ್ಲಿಸಲು 30 ದಿನಗಳ ಕಾಲವಕಾಶವನ್ನು ನೀಡಿದೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಇಲಾಖಾ ವೆಬ್ ಸೈಟ್‌ನಲ್ಲಿ (www.schooleducation.kar.nic.in) **ಜೇಷ್ಠತಾ ಪಟ್ಟಿಯನ್ನು ಪಡೆದುಕೊಂಡು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಮ್ಮ ಕಛೇರಿಯ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಿ ಮತ್ತು ಜಿಲ್ಲೆಯ ಸ್ಥಳೀಯ** ದಿನ ಪತ್ರಿಕೆಗಳಲ್ಲಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗಬಹುದಾದಂತಹ ಶಿಕ್ಷಕರುಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸುವ ಬಗ್ಗೆ ಪ್ರಕಟಿಸಿ ವ್ಯಾಪಕ ಪ್ರಚಾರ ನೀಡಲು ತಿಳಿಸಿದೆ. ನಂತರ ಶಿಕ್ಷಕರಿಂದ ಬರುವಂತಹ ಆಕ್ಷೇಪಣೆಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಪಡೆದು ಕ್ರೋಢೀಕರಿಸಿ ಈ ಕಛೇರಿಗೆ ಕೆಳಕಂಡ ನಿರ್ದೇಶನವನ್ನು ಗಮನದಲ್ಲಿಟ್ಟುಕೊಂಡು ಸಲ್ಲಿಸಲು ತಿಳಿಸಿದೆ.

1. ಸಂಬಂಧಪಟ್ಟ ಉಪನಿರ್ದೇಶಕರುಗಳು ತಮ್ಮ ವ್ಯಾಪ್ತಿಯಲ್ಲಿನ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿಳಾಸದಲ್ಲಿ ಶಾಲೆಯ ಹೆಸರು,ಸ್ಥಳ,ತಾಲ್ಲೋಕ್ ಮತ್ತು ಜಿಲ್ಲೆಯ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಲು ತಿಳಿಸಿದೆ, ಮಾಹಿತಿಯನ್ನು ಎಕ್ಸೆಲ್(excel) ತಂತ್ರಾಂಶದ ನುಡಿ-01 ರಲ್ಲಿ ಗಣಕೀಕರಿಸಿ ಆಯಾ ಜಿಲ್ಲೆಯ ಉಪನಿರ್ದೇಶಕರ ಕಛೇರಿ ವಿಷಯ ನಿರ್ವಾಹಕರೇ ಖುದ್ದು ಆಯುಕ್ತಾಲಯಕ್ಕೆ ಸಲ್ಲಿಸುವುದು.
2. ಈಗಾಗಲೇ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸಿರುವ ಪ್ರೌಢಶಾಲಾ ಶಿಕ್ಷಕರ ಜೇಷ್ಠತಾ ಪಟ್ಟಿಯ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಗಣಕೀಕರಿಸಿ ಉಪನಿರ್ದೇಶಕರ ದೃಢೀಕರಣದೊಂದಿಗೆ ಸಲ್ಲಿಸುವುದು.
3. ಪ್ರಸ್ತುತ ಉಪನಿರ್ದೇಶಕರು ಸಲ್ಲಿಸಿರುವ ಜೇಷ್ಠತಾಪಟ್ಟಿಯನ್ನು ಪರಿಶೀಲಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು **ತಯಾರಿಸುವ ಸಂದರ್ಭದಲ್ಲಿ ಕೆಳಕಂಡ ಮಾಹಿತಿಗಳು ಅಪೂರ್ಣವಾಗಿದ್ದರು ಸಹ ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಪರಿಶೀಲಿಸದೇ ಅಪೂರ್ಣಮಾಹಿತಿ ಸಲ್ಲಿಸಿರುವಂತಹ ಕಛೇರಿ ವ್ಯಾಪ್ತಿಯವರು ಈ ಕೆಳಕಂಡ ಅಂಶಗಳನ್ನು** 1. ಸೇವೆಗೆ ಸೇರಿದ ದಿನಾಂಕ 2. ಶಿಕ್ಷಕರ ವಿಳಾಸ 3. ಜನ್ಮ ದಿನಾಂಕ, 4. ಗ್ರೇಡ್-2 ಹುದ್ದೆಗೆ ಬಂದ ದಿನಾಂಕವನ್ನು ಪರಿಶೀಲಿಸಿಕೊಂಡು, ಜೇಷ್ಠತಾ ಪಟ್ಟಿ ಆಕ್ಷೇಪಣೆಗಳನ್ನು ಸರಿಪಡಿಸಿ ಸಲ್ಲಿಸುವುದು.

4. ಮೇಲ್ಕಂಡ ಅವಧಿಯಲ್ಲಿ ಶಿಕ್ಷಕರುಗಳು ಅಂತರ ವಿಭಾಗ ವರ್ಗಾವಣೆಯಾಗಿ ಬಂದರೆ ಜೇಷ್ಟತೆಯಲ್ಲಿ ಕಿರಿಯರಾಗುವುದರಿಂದ ಅಂತವರನ್ನು ಜೇಷ್ಟತಾಪಟ್ಟಿ ಕೆಳ ಭಾಗದಲ್ಲಿ ನಮೂದಿಸಿ ಸಲ್ಲಿಸುವುದು.
5. ದಿನಾಂಕ:22/09/2015 ರಂದು ಬೆಂಗಳೂರು ವಿಭಾಗದ ಜಿಲ್ಲಾ ಉಪನಿರ್ದೇಶಕರ ಕಛೇರಿ ವಿಷಯ ನಿರ್ವಾಹಕರು ಆಯುಕ್ತಾಲಯವಾರು ತಾತ್ಕಾಲಿಕ ಜೇಷ್ಟತಾ ಪಟ್ಟಿ ಆಕ್ಷೇಪಣೆಗಳನ್ನು ಖುದ್ದು ಈ ಕಛೇರಿಗೆ ಸಲ್ಲಿಸುವುದು.
6. ದಿನಾಂಕ:24/09/2015 ರಂದು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರು ಕಛೇರಿ ವಿಷಯ ನಿರ್ವಾಹಕರು ಆಯುಕ್ತಾಲಯವಾರು ತಾತ್ಕಾಲಿಕ ಜೇಷ್ಟತಾ ಪಟ್ಟಿ ಆಕ್ಷೇಪಣೆಗಳನ್ನು ಖುದ್ದು ಈ ಕಛೇರಿಗೆ ಸಲ್ಲಿಸುವುದು.
7. ಆಯುಕ್ತಾಲಯವಾರು ಮೂಲ ಜೇಷ್ಟತಾ ಪಟ್ಟಿಯನ್ನು ದಿನಾಂಕ:15.10.2015 ರಂದು ಅಂತಿಮವಾಗಿ ಪ್ರಕಟಿಸಲಾಗುವುದು. ಮತ್ತು ಅಂತಿಮವಾಗಿ ಪ್ರಕಟವಾದ ನಂತರ ಯಾವುದೇ ಬದಲಾಣೆ ಮಾಡಲು ಅವಕಾಶವಿರುವುದಿಲ್ಲ ಆದ್ದರಿಂದ ಬಾಧಿತ ಶಿಕ್ಷಕರುಗಳಿಂದ ಸರಿಯಾದ ಸಂಪೂರ್ಣವಾದ ನಿಖರ ಮಾಹಿತಿಯನ್ನು ಪಡೆದು ಸಲ್ಲಿಸಲು ತಿಳಿಸಿದೆ.
8. ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೂಂಡು ನಿಖರವಾದ ಮಾಹಿತಿಯನ್ನು ಆಯುಕ್ತಾಲಯಕ್ಕೆ ನೇರವಾಗಿ ಸಲ್ಲಿಸುವುದು, ಸಲ್ಲಿಸದೇ ಇದ್ದ ಪಕ್ಷದಲ್ಲಿ ಉಪನಿರ್ದೇಶಕರನ್ನೆ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಮಾನ್ಯ ಆಯುಕ್ತರಿಗೆ ಶಿಫಾರಸ್ಸು ಮಾಡಲಾಗುವುದು.

ನಿರ್ದೇಶಕರು(ಪ್ರೌಢಶಿಕ್ಷಣ)

**ಇವರಿಗೆ,**

1. ಬೆಂಗಳೂರು/ ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು/ ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಮುಂದಿನ ಕ್ರಮಕ್ಕಾಗಿ
3. ಕಛೇರಿ ಪ್ರತಿ.

\\10.96.135.22\e\e\est4\vijay\seniority list\seniority circulars.docx